# 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ.933/2020

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ವೀರಭದ್ರು | ಚಾಸಾ- 5 |
| **ತಂದೆಯ ಹೆಸರು** | ಃ | ಕರಿಯ್ಯ | ಪ್ರಾಸಾ- 6 |
| **ವಯಸ್ಸು** | ಃ | 44 ವರ್ಷ | |
| **ಉದ್ಯೋಗ** | ಃ | ಅಭಕಾರಿ ಪೇದೆ | ಪ್ರಮಾಣ ವಚನ ಬೋಧಿಸಲಾಯಿತು |
| **ವಾಸ** | ಃ | ಚನ್ನರಾಯಪಟ್ಟಣ | ದಿನಾಂಕಃ 12.06.2026 |

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ದಿಃ **15.09.2015**ರಿಂದ **2022**ಡಿಸೆಂಬರ್ ವರಿಗೂ ಚನ್ನರಾಯಪಟ್ಟಣ ಅಭಕಾರಿ ಕಛೇರಿಯಲ್ಲಿ ಪೇದೆ ಯಾಗಿ ಕರ್ತವ್ಯ ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ **20.11.2021** ರಂದು ದಂಡಿಗನಹಳ್ಳಿಯ ಬಳಿ ಹೋಗಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳ ಬಳಿ ಹೋಗಿ ನಮ್ಮ ಪರಿಚಯ ಹೇಳಿಕೊಂಡು ಅವರ ಪರಿಚಯವನ್ನು ಕೇಳಿ ನಾವು ಬಂದ ಕಾರಣ ತಿಳಿಸಿದೇವು.

ದಂಡಿಗನಹಳ್ಳಿ ಗ್ರಾಮದಲ್ಲಿ ಇರುವ ಆರೋಪಿಯು ತಮ್ಮ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿರುತ್ತದೆ. ಮಾಹಿತಿಯ ಸಂಬಂಧ ನಾವು ಇಲ್ಲಿಗೆ ಬಂದಿರುವುದಾಗಿ ಆ ಮೂರು ಜನರಿಗೆ ತಿಳಿಸಿ. ಸದರಿ ವ್ಯಕ್ತಿಯ ಮನೆಯನ್ನು ಶೋಧಿಸುವಾಗ ತಾವುಗಳು ಪಂಚರಾಗಿ ಬಂದು ಹಾಜರು ಇದ್ದು ಸಹಕರಿಸಬೇಕು ಎಂದು ಕೇಳಿಕೊಂಡಾಗ, ಅವರುಗಳು ಒಪ್ಪಿ ಇಲಾಖ ವಾಹನದಲ್ಲಿ ನಮ್ಮ ಜೊತೆ ಬಂದಿರುತ್ತಾರೆ. ಅವರಿಗೆ ಪಂಚರ ನೋಟಿಸ್ಸ್ ನ್ನು ನೀಡಿ ಸಹಿ ಪಡೆದುಕೊಳ್ಳಲಾಯಿತು. ನಂತರ ನ್ಯಾಯಾಲಯದಿಂದ ಶೋಧನ ವಾರೆಂಟ್ ಅನ್ನು ಪಡೆದುಕೊಳ್ಳಲು ಸಮಯವಾಕಾಶ ಇಲ್ಲದ ಕಾರಣ ಹಾಗೂ ತಡಯಾದರೆ ಆರೋಪಿಯು ಸಾಕ್ಷ್ಯವನ್ನು ನಾಶಮಾಡಬಹುದು ಎಂಬ ಕಾರಣಕ್ಕೆ ಕರ್ನಾಟಕ ಅಭಕಾರಿ ಕಾಯ್ದೆ **1965** ಅಡಿಯಲ್ಲಿ ಅಧಿಕಾರವಿದ್ದ ಕಾರಣ ಶೋಧನ ಸಮುಚಿತ ವಾರೆಂಟ್ ನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರ ಸಹಿ ಪಡೆದುಕೊಳ್ಳಲಾಯಿತು.

ನಂತರ ಮಾಹಿತಿ ಇದ್ದ ಮನೆಯನ್ನು ತೋರಿಸಿರುತ್ತಾರೆ. ನಂತರ ಮನೆಯ ಬಳಿ ಮಹಿಳೆ ಒಬ್ಬರೂ ನಿಂತಿರುವುದು ಕಂಡುಬಂದಿದ್ದು ನಮ್ಮನ್ನು ನೋಡಿ ಗಾಬರಿಗೂಂಡು ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು

ಸಿಕ್ಕಿರುವುದಿಲ್ಲ. ಪಂಚರು ಮಾಹಿತಿ ಇರುವ ವ್ಯಕ್ತಿಯೇ ಓಡಿ ಹೋಗಿದ್ದು ಎಂದು ನಮಗೆ ತಿಳಿಸಿರುತ್ತಾರೆ. ನಂತರ ಸಿಬ್ಬಂದಿ ಪಂಚರ ಸಹಾಯದಿಂದ ಅಂಗ ಶೋಧನೆ ಮಾಡಿಕೊಂಡು, ಶೋಧಿಸಿದಾಗ ಮನೆಯಕೊಠಡಿಯ ಒಂದು ಮೂಲೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದ್ದು ಅದನ್ನು ಮನೆಯ ಮುಂಭಾಗ ತಂದು ಸುರಿದು ನೋಡಿದಾಗ ಅದರಲ್ಲಿ ಭದ್ರತ ಚೀಟಿ ಸಂಖ್ಯೆ ಇಲ್ಲದ ಒರಿಜಿನಲ್ ಹೆಸರಿನ **90**ಮಿ **58** ಟೆಟ್ರಾ ಪ್ಯಾಕ್ ಗಳು ಕಂಡುಬಂದಿರುತ್ತದೆ. ಸದರಿ ಮಧ್ಯವನ್ನು ಹೊಂದಲು ಪರವಾನಿಗೆ ಹಾಗೂ ರಹದಾರಿ ಇದೆಯೇ ಎಂದು ಪರೀಲನೆ ಮಾಡಿದ್ದು ಕಂಡುಬಂದಿರುವುದಿಲ್ಲ. ಕಾನೂನಿನ ಅರಿವಿಲ್ಲದೇ ಮಧ್ಯವನ್ನು ಮಾರಾಟ ಮಾಡಿ ಹಣಗಳಿಸುವ ಉದ್ದೇಶದಿಂದ ಮಧ್ಯದ ದಾಸ್ತಾನು ಹೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಈ ರೀತಿಯಾಗಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುವುದು ಕರ್ನಾಟಕ ಅಭಕಾರಿ ಕಾಯ್ದೆ ಕಲಂಗಳ ರೀತ್ಯ ಶಿಕ್ಷರ್ಹ ಅಪರಾಧ ಎಂದು ತಿಳಿಸಿ ಸದರಿ ಮಧ್ಯವನ್ನು ಸ್ಥಳ ಮಹಜರ್ ಕ್ರಮ ಜರುಗಿಸುವ ಮೂಲಕ ಇಲಾಖ ವಶಕ್ಕೆ ಪಡೆದು ದೊರೆತ ಮಧ್ಯದ ಪೈಕಿ ಒರಿಜಿನಲ್ ಚಾಯ್ಸ್ ವಿಸ್ಕಿಯ **30** ಟೆಟ್ರಾ ಪ್ಯಾಕ್ ಗಳನ್ನು ರಸಾಯಿನಿಕ ಪರಿಕ್ಷೇಗೆಂದು ಸ್ಥಳದಲ್ಲೇ ಮಾದರಿಯನ್ನು ತೆಗೆದು ಇಲಾಖ ವಾಹನದಲ್ಲಿ ಇದ್ದ ಬಿಳಿ ಬಟ್ಟೆ ಸೂಜಿ ದಾರ ತಂದು ಇತರೆ ಸಾಮಾಗ್ರಿಗಳನ್ನು ತಂದು ಬಳಿ ಬಟ್ಟೆಯಿಂದ ಒಂದು ಬ್ಯಾಗ್ ಅನ್ನು ತಯಾರಿಸಿಕೊಂಡು ಮಾದರಿ ತೆಗೆದ **30** ಟೆಟ್ರಾ ಪ್ಯಾಕ್ ಗಳನ್ನು ಆ ಬ್ಯಾಗ್ ನಲ್ಲಿ ತುಂಬಿ ದಾರದಿಂದ ಹೊಲೆದು ಕಟ್ಟಿ, ಇಲಾಖ ಸೀಲ್ ನಂ **337** ರಿಂದ ಸೀಲ್ ಮಾಡಲಾಯಿತು. ಮಾದರಿ ಸೀಲ್ ನ ನಕಲನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಳ್ಳಲಾಯಿತು. ಮಾದರಿ ಚೀಟಿಯನ್ನು ಮಾದರಿ ಚೀಲಕ್ಕೆ ಅಂಟಿಸಲಾಯಿತು. ನಂತರ ಮಾದರಿ ತೆಗೆದು ಉಳಿದ ಟೆಟ್ರಾ ಪ್ಯಾಕ್‌ಗಳನ್ನು ಮುಂದಿನ ತೆಖೆಗಾಗಿ ವಶಪಡಿಸಿಕೊಳ್ಳಲಾಯಿತು. ನಂತರ ಉಳಿದ ಟೆಟ್ರಾ ಪ್ಯಾಕ್ ಗಳನ್ನು ಮೇಲಾಧಿಕಾರಿಗಳ ಆದೇಶದಂತೆ ನಾಶ ಪಡಿಸುವುದಾಗಿ ಪಂಚರಿಗೆ ತಿಳಿಸಿ, ದೊರೆತ ಪ್ಲಾಸ್ಟಿಕ್ ಚೀಲಕ್ಕೆ ತುಂಬಿ ಕಛೇರಿಗೆ ತರಲಾಯಿತು.

ಸದರಿ ಸ್ಥಳ ಮಹಜರ್ ಕ್ರಮವನ್ನು ಮ **1.20** ರಿಂದ **2.30** ವರಿಗೂ ಬರೆಯಲಾಯಿತು. ಸದರಿ ಮಹಜರ್ ಕ್ರಮವನ್ನು ಪಂಚರಾದ ಚಾಸಾ-**2, 3, 4,** ಚಾಸಾ-**1** ಹಾಗೂ ನಾನು ಸಹಿ ಮಾಡಿರುತ್ತೇನೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ನಿಪಿ-**1** ರಲ್ಲಿನ ಸಹಿಯನ್ನು ನಿಪಿ-**1**(ಇ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ-** ಶ್ರೀ ಡಿಎವಿ ಆರೋಪಿ ಪರ ವಕೀಲರಿಂದ

ಮಾಹಿತಿಯನ್ನು ಚಾಸಾ-**1**ರವರು ನಮಗೆ ಹೇಳಿರುತ್ತಾರೆ. ಆ ದಿನ ಕಛೇರಿಯನ್ನು ಬೆಳಿಗ್ಗೆ **10.00** ಗಂಟೆಗೆ ಬಿಟ್ಟಿರುತ್ತೇವೆ. ಆ ದಿನ ಬಿಎಂ ರಸ್ತೆಯಲ್ಲಿ ಗಸ್ತು ಮಾಡಿರುತ್ತೇವೆ. ದಂಡಿಗನಹಳ್ಳಿಗೆ ಹೋದಾಗ ಮ **1.00**

ಗಂಟೆಯಾಗಿತ್ತು. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ **1.50** ರಿಂದ **2** ಕಿಮಿ ಆಗುತ್ತದೆ. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ. ಚಾಸಾ-**2, 3** ರವರು ದಂಡಿಗನಹಳ್ಳಿ ಗ್ರಾಮದವರು. ಸದರಿಯವರ ಸಹಿಯನ್ನು ದಿಃ **20.11.2021** ರಂದು ಹೊರತು ಪಡಿಸಿ ಬೇರೆ ದಿನ ಅವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ಅದೇ ದಿನ ಸದರಿಯವರಿಗೆ ನೋಟಿಸ್ಸ್ ಜಾರಿಯಾಗಿರುತ್ತದೆ. ಶೋಧನ ಸುಮುಚಿತ್ತ ವಾರೆಂಟ್ ಗೆ ದಿಃ **20.11.2021** ರಂದು ಪಂಚರ ಸಹಿ ಪಡೆದಿರುತ್ತೇವೆ. ನಿಪಿ-**4** ರಲ್ಲಿ ದಿಃ **19.11.2021** ರಂದು ದಿನಾಂಕ ನಮೂದು ಆಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-**4**ಕ್ಕೆ ಚಾಸಾ-**2, 3**ರವರ ಸಹಿಯನ್ನು ದಿಃ **19.11.2021** ರಂದು ಪಡೆದಿರುವುದಾಗಿ ನಮೂದು ಆಗಿದೆ ಎಂದರೆ ಸಾಕ್ಷಿಯು ನೋಡಿ ಹೌದು ಎಂದು ನುಡಿದಿರುತ್ತಾರೆ.

ನೋಟಿಸ್ಸ್ ನಲ್ಲಿ ಚಾಸಾ-**2** ರವರು ದಂಡಿಗನಹಳ್ಳಿ ಎಂದು ನಮೂದು ಆಗಿರುತ್ತದೆ. ಚಾಸಾ-**2**ರವರು ತೆಂಕನಹಳ್ಳಿ ಗ್ರಾಮ ಎಂದು ನೋಟಿಸ್ಸ್ ನಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ, ನೋಟಿಸ್ಸ್ ಜಾರಿ ಮಾಡಿಲ್ಲ ಹಾಗೂ ನಿಪಿ-**1**ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಆರೋಪಿಯು ನಮ್ಮನ್ನು ನೋಡಿ ಓಡಿ ಹೋದರು ಎಂದು ಹೇಳಿದ್ದು ಆದರೆ ಯಾವ ಬಣ್ಣದ ಬಟ್ಟೆಯನ್ನು ಹಾಕಿದ್ದ ಎಂದು ನೆನಪಿಲ್ಲ. ಆದಿನ ಮುಮಾ-**1** ಇದ್ದ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಈ ದಿನ ನ್ಯಾಯಾಲಯದಲ್ಲಿ ಪ್ಲಾಸ್ಟಿಕ್ ಚೀಲ ಇರುವುದಿಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಮಹಜರ್ ನ್ನು ಪಂಚರ ಸಮಕ್ಷಮ ಮಾಡದೇ ಇದ್ದರು ಚಾಸಾ-**1**ರವರು ಮೇಲಾಧಿಕಾರಿಯಾಗಿದ್ದರಿಂದ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫೋಟೋ ಮತ್ತು ವಿಡಿಯೋ ಮಾಡಿರುವುದಿಲ್ಲ. ಆ ದಿನ ಆರೋಪಿಯು ಮುಮಾ-**1**ನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ